# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 870 |
| ವಿಧಾನಪರಿಷತ್ತುಸದಸ್ಯರು | ಶ್ರೀ.ಮುನಿರಾಜುಗೌಡ.ಪಿ.ಎಂ.(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 13.12.2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಭೂಮಿ ಮತ್ತು ಗ್ರಾಮ ಠಾಣಾ ವ್ಯಾಪ್ತಿಯ ಗಡಿಯನ್ನು ಗುರುತಿಸುವುದು ತಹಶೀಲ್ದಾರ್ ಅಥವಾ ಎ.ಡಿ.ಎಲ್.ಆರ್. ರವರುಗಳ ಜವಾಬ್ದಾರಿಯಾಗಿದೆಯೇ; | ಖಾಸಗಿ ಜಮೀನುಗಳ ಗಡಿ ಗುರುತಿಸಲು ಸಂಬಂಧಪಟ್ಟ ಹಕ್ಕುದಾರರು ಹೋಬಳಿ ಮಟ್ಟದ ಅಟಲ್-ಜಿ ಜನಸ್ನೇಹಿ ಕೇಂದ್ರಗಳಲ್ಲಿ ನಿಗಧಿತ ಶುಲ್ಕ ಪಾವತಿಸಿ ಅರ್ಜಿ ದಾಖಲಿಸಿದಲ್ಲಿ ಅಂತಹ ಜಮೀನುಗಳ ಗಡಿ ಗುರುತಿಸುವ ಕಾರ್ಯವನ್ನು ಮತ್ತು ಸರ್ಕಾರಿ ಜಮೀನು / ಗ್ರಾಮ ಠಾಣಾ ಗಡಿ ಗುರುತಿಸಲು ಕಂದಾಯ ಅಥವಾ ಸಂಬಂದಿಸಿದ ಅಧಿಕಾರಿಗಳು ಕೋರಿದಲ್ಲಿ ಸಂಬಂಧಿಸಿದ ಭೂದಾಖಲೆಗಳನ್ನು ಆಧರಿಸಿ ಆದ್ಯತೆಯ ಮೇರೆಗೆ ನಿಯಮಾನುಸಾರ ಅಳತೆ ಕಾರ್ಯ ಕೈಗೊಳ್ಳುವುದು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯ ಜವಾಬ್ದಾರಿಯಾಗಿದೆ. |
| ಆ) | ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಗ್ರಾಮ ಠಾಣಾ ಮತ್ತು ಕಂದಾಯ ಭೂಮಿಯ ಗಡಿಯನ್ನು ಗುರುತಿಸುವಂತೆ ಪುರಸಭೆಯ ಅಧಿಕಾರಿಗಳು ಎ.ಡಿ.ಎಲ್.ಆರ್. ಅವರಿಗೆ ಪತ್ರ ಬರೆದಿದ್ದಾರೆಯೇ; ಬರೆದಿದ್ದಲ್ಲಿ, ಎ.ಡಿ.ಎಲ್.ಆರ್. ಅವರು ಈ ಬಗ್ಗೆ ಕೈಗೊಂಡ ಕ್ರಮಗಳೇನು; | ಗ್ರಾಮ ಠಾಣಾ ಮತ್ತು ಕಂದಾಯ ಭೂಮಿ ಗಡಿ ಗುರುತಿಸುವಂತೆ ಪುರಸಭೆಯ ಅಧಿಕಾರಿಗಳು ಭೂದಾಖಲೆಗಳ ಸಹಾಯಕ ನಿರ್ದೇಶಕರು ಬೆಂಗಳೂರು ಉತ್ತರ ತಾಲ್ಲೂಕು ಇವರಿಗೆ ನೀಡಿರುವ ಪತ್ರಗಳು & ಕೈಗೊಂಡ ಕ್ರಮಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಇ) | ಕಂದಾಯ ಭೂಮಿ ಮತ್ತು ಗ್ರಾಮ ಠಾಣಾ ವ್ಯಾಪ್ತಿಯನ್ನು ಗುರುತು ಮಾಡುವುದು ಎ.ಡಿ.ಎಲ್.ಆರ್. ಮತ್ತು ತಹಶೀಲ್ದಾರ್ ತಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಹಿಂಬರಹ ನೀಡಿರುವುದು ಸಮಂಜಸವೇ; ಹಾಗಿದ್ದಲ್ಲಿ, ಯಾವ ಇಲಾಖೆಯವರು ಕಂದಾಯ ಭೂಮಿ ಮತ್ತು ಗ್ರಾಮ ಠಾಣಾ ವ್ಯಾಪ್ತಿಯ ಗಡಿಯನ್ನು ಗುರುತಿಸ ಬೇಕಾಗುತ್ತದೆ; | ಕಂದಾಯ ಭೂಮಿ ಮತ್ತು ಗ್ರಾಮ ಠಾಣಾ ವ್ಯಾಪ್ತಿಯನ್ನು ಗುರುತು ಮಾಡುವುದು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗಳ ವ್ಯಾಪ್ತಿಗೆ ಬರುವುದಿಲ್ಲವೆಂದು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗಳಿಂದ ಯಾವುದೇ ಹಿಂಬರಹ ನೀಡಿರುವುದಿಲ್ಲ. ಭೂಮಾಪಕರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳ ಸಹಯೋಗದೊಂದಿಗೆ ಕಂದಾಯ ಭೂಮಿ ಮತ್ತು ಗ್ರಾಮ ಠಾಣಾ ವ್ಯಾಪ್ತಿ/ಗಡಿಯನ್ನು ಗುರುತಿಸಬೇಕಾಗುತ್ತದೆ |

| | | |
|---|---|---|
| ಈ) | ತಹಶೀಲ್ದಾರ್ ಮತ್ತು ಎ.ಡಿ.ಎಲ್.ಆರ್. ಎರಡೂ ಕಾರ್ಯಾಲಯದವರು ತಮ್ಮ ಜವಾಬ್ದಾರಿ ನಿರ್ವಹಿಸಲು ವಿಫಲರಾಗಿ ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | ಈ ಕುರಿತು ನಿರ್ದಿಷ್ಟ ದೂರುಗಳು ಸ್ವೀಕೃತವಾದಲ್ಲಿ ತನಿಖಾ ವರದಿ ಪಡೆದು ಸಂಬಂಧಪಟ್ಟ ಅಧಿಕಾರಿ / ನೌಕರರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: ಕಂಇ 199 ಎಸ್ಎಸ್ಸಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| | | | | |
|---|---|---|---|---|
| ಅನುಬಂಧ-1 | | | | |
| ಗ್ರಾಮ ಠಾಣಾ ಮತ್ತು ಕಂದಾಯ ಭೂಮಿ ಗಡಿ ಗುರುತಿಸುವಂತೆ ಪುರಸಭೆಯ ಅಧಿಕಾರಿಗಳು ಭೂದಾಖಲೆಗಳ ಸಹಾಯಕ ನಿರ್ದೇಶಕರು ಬೆಂಗಳೂರು ಉತ್ತರ ತಾಲ್ಲೂಕ ಇವರಿಗೆ ನೀಡಿರುವ ಪತ್ರಗಳ ವಿವರ | | | | |
| ಕ್ರ | ಯಾರಿಂದ ಸ್ವೀಕೃತವಾಗಿದೆ | ಪ್ರಕರಣ ಸಂಖ್ಯೆ | ಸ್ವತ್ತಿನ ಸಂಖ್ಯೆ | ಷರಾ |
| 1 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದಾಸನಪುರ ಗ್ರಾಮ ಪಂಚಾಯಿತಿ | ದಾ.ಗ್ರಾ.ಸಂ/85/2022-23, ದಿನಾಂಕ: 9-9-2022 (ಸ್ವೀಕೃತಿ ದಿ:21-09-2022). | ಶಿವನಪುರ ಗ್ರಾಮದ ಗ್ರಾಮಠಾಣ ಸ್ಕೆಚನ್ನು ಸರ್ವೆ ಮಾಡಿಸಿ ನೀಡುವ ಬಗ್ಗೆ. | ಅಳತೆಗಾಗಿ ತಹಶೀಲ್ದಾರ್ ಅಧೀನದಲ್ಲಿರುವ ತಾಲ್ಲೂಕು ಭೂಮಾಪಕರಿಗೆ ದಿನಾಂಕ:1-12-2022 ರಂದು ವಿತರಿಸಿದೆ. |
| 2 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೊಂಡೇಕೊಪ್ಪ ಗ್ರಾಮ ಪಂಚಾಯಿತಿ | ಸೊಗ್ರಾಪಂ/206/2022-23, ದಿ: 28-02-2023 | ಹುಣ್ಣಿಗೆರೆ ಗ್ರಾಮದ ಗ್ರಾಮ ಠಾಣ ಹಾಗೂ ಬಸವಣ್ಣ ದೇವಸ್ಥಾನದ ಜಾಗವನ್ನು ಅಳತೆ ಮಾಡಿ ಗಡಿ ಗುರುತಿಸುವ ಬಗ್ಗೆ. | ಅಳತೆಗಾಗಿ ತಹಶೀಲ್ದಾರ್ ರವರ ಅಧೀನದಲ್ಲಿರುವ ತಾಲ್ಲೂಕು ಭೂಮಾಪಕರಿಗೆ ದಿನಾಂಕ: 24-3-2023 ರಂದು ವಿತರಿಸಿದೆ. |
| 3 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಹುಸ್ಕೂರು ಗ್ರಾಮ ಪಂಚಾಯಿತಿ | ಹುಗ್ರಾಪಂ:137/2022-23 ದಿನಾಂಕ:19-12-2022 | ಹುಚ್ಚನ ಪಾಳ್ಯ ಗ್ರಾಮದ ಖಾನೇಷುಮಾರಿ ನಂಬರ್ 8 ರ ಸ್ವತ್ತು ಸರ್ವೆ ನಂಬರ್ ಮತ್ತು ಗ್ರಾಮ ಠಾಣದ ಬಫರ್ ಜೋನ್‌ನಲ್ಲಿ ಬರುತ್ತಿವುದರಿಂದ ಗಡಿಯನ್ನು ಗುರುತಿಸುವ ಬಗ್ಗೆ | ಅಳತೆಗಾಗಿ ತಹಶೀಲ್ದಾರ್ ಅಧೀನದಲ್ಲಿರುವ ತಾಲ್ಲೂಕು ಭೂಮಾಪಕರಿಗೆ ದಿನಾಂಕ:23-01-2023 ರಂದು ವಿತರಿಸಿದೆ. |
| 4 | ಮುಖ್ಯಧಿಕಾರಿ ಪುರಸಭೆ, ಚಿಕ್ಕಬಾಣಾವರ | ಪಿಕಾಚಿ/ಕಂ.ಶಾ/ಸಿ.ಆರ್/2022-23 ದಿನಾಂಕ:08-12-2022 | ಸೋಮಶೆಟ್ಟಿಹಳ್ಳಿ ಗ್ರಾಮದ ಗ್ರಾಮ ಠಾಣ ಅಳತೆ ಮಾಡುವ ಬಗ್ಗೆ. | ಅಳತೆಗಾಗಿ ತಹಶೀಲ್ದಾರ್ ಅಧೀನದಲ್ಲಿರುವ ತಾಲ್ಲೂಕು ಭೂಮಾಪಕರಿಗೆ ದಿನಾಂಕ:16-01-2023 ರಂದು ವಿತರಿಸಿದೆ. |
| 5 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆಲೂರು ಗ್ರಾಮ ಪಂಚಾಯಿತಿ | ಆಗ್ರಾಪಂ:ಮಾಹೆ/70/2021-22 | ಹೆಗ್ಗಡದೇವನಪುರ ಗ್ರಾಮದ "ಪಾಳ್ಯ" ಗ್ರಾಮ ಠಾಣ ಗುರುತಿಸುವ ಬಗ್ಗೆ. | ಅಳತೆಗಾಗಿ ತಹಶೀಲ್ದಾರ್ ಅಧೀನದಲ್ಲಿರುವ ತಾಲ್ಲೂಕು ಭೂಮಾಪಕರಿಗೆ ದಿನಾಂಕ:16-01-2023 ರಂದು ವಿತರಿಸಿದೆ. |
| 6 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಹುಸ್ಕೂರು ಗ್ರಾಮ ಪಂಚಾಯಿತಿ | ಹುಗ್ರಾಪಂ.179/2023-24, ದಿನಾಂಕ:24-05-2023 | ಹುಸ್ಕೂರು ಗ್ರಾಮ ಪಂಚಾಯಿತಿ ಕೋಡಿಪಾಳ್ಯ ಗ್ರಾಮದ ಪಕ್ಕದಲ್ಲಿರುವ ಗ್ರಾಮ ಠಾಣ ಜಾಗದ ಗಡಿ ಗುರುತಿಸಿಕೊಡುವ ಬಗ್ಗೆ | ಅಳತೆಗಾಗಿ ತಹಶೀಲ್ದಾರ್ ಅಧೀನದಲ್ಲಿರುವ ತಾಲ್ಲೂಕು ಭೂಮಾಪಕರನ್ನು ನಿಯೋಜಿಸಿ ಅಳತೆ ಪೂರೈಸಿ ದಿನಾಂಕ: 16-05-2023 ರಂದು ತಹಶೀಲ್ದಾರ್ ರವರ ಕಛೇರಿಗೆ ಪತ್ರ ಬರೆದಿದೆ. |